# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಸಾರ್ವಜನಿಕ ಶಿಕ್ಷಣ ಇಲಾಖೆಯ ಲಿಪಿಕ ವೃಂದದ ತಾತ್ಕಾಲಿಕ ಪತ್ರಾಂಕಿತ ಸಹಾಯಕರು ಹಾಗೂ ಗ್ರೂಪ್-ಎ ಹುದ್ದೆಗಳನ್ನು ಖಾಯಂ ಆಗಿ ಮುಂದುವರೆಸುವ ಬಗ್ಗೆ.

**ಓದಲಾಗಿದೆ:-**
1. ಸರ್ಕಾರದ ಆದೇಶ ಸಂಖ್ಯೆ:ಇಡಿ 67 ಡಿಪಿಐ 2000, ದಿನಾಂಕ:21/07/2001.
2. ಸರ್ಕಾರದ ಆದೇಶ ಸಂಖ್ಯೆ:ಇಡಿ 172 ಯೋಯೋಕ 2003, ದಿನಾಂಕ:21/05/2003.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ:ಸಿ5(2)(9)/ಇತರೆ-44/1989-90, ದಿನಾಂಕ:01/03/2005 ಮತ್ತು 07/07/2005.

**ಪ್ರಸ್ತಾವನೆ:-**

ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಲಿಪಿಕ ನೌಕರರ ಬೇಡಿಕೆಗಳನ್ನು ಈಡೇರಿಸುವ ಉದ್ದೇಶದಿಂದ ಹಾಗೂ ಇಲಾಖೆಯ ಕಾರ್ಯಗಳು ಸುಗಮವಾಗಿ ಹಾಗೂ ಸುವ್ಯವಸ್ಥಿತವಾಗಿ ನಡೆಸುವುದಕ್ಕಾಗಿ ಸಾರ್ವಜನಿಕ ಶಿಕ್ಷಣ ಇಲಾಖೆ, ಲಿಪಿಕ ವೃಂದದ ತಾತ್ಕಾಲಿಕ ಪತ್ರಾಂಕಿತ ಸಹಾಯಕರು ಹಾಗೂ ಗ್ರೂಪ್-ಎ ವೃಂದದ ಈ ಕೆಳಕಂಡ 8 ಹುದ್ದೆಗಳನ್ನು ದಿನಾಂಖ:01/04/2001 ರಿಂದ 31/03/2003 ರವರೆಗೆ ತಾತ್ಕಾಲಿಕವಾಗಿ ಎರಡು ವರ್ಷಗಳಿಗೆ ಮುಂದುವರೆಸಿ ಆದೇಶಿಸಲಾಗಿತ್ತು.

i) ಉಪ ನಿರ್ದೇಶಕರು (ಆಡಳಿತ) – ವೇತನ ಶ್ರೇಣಿ ರೂ.9580-14200 – 1 ಹುದ್ದೆ

ii) ಹಿರಿಯ ಸಹಾಯಕ ನಿರ್ದೇಶಕರು – ವೇತನ ಶ್ರೇಣಿ ರೂ.7400-13120 – 3 ಹುದ್ದೆಗಳು

iii) ಸಹಾಯಕ ನಿರ್ದೇಶಕರು – ವೇತನ ಶ್ರೇಣಿ ರೂ.5575-10620 – 4 ಹುದ್ದೆಗಳು

ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಸದರಿ ಹುದ್ದೆಗಳನ್ನು ದಿನಾಂಕ:01/04/2003 ರಿಂದ 31/03/2004 ರವರೆಗೆ ತಾತ್ಕಾಲಿಕವಾಗಿ ಮುಂದುವರೆಸಿ ಆದೇಶಿಸಲಾಗಿತ್ತು.

ಮೇಲೆ (3) ರಲ್ಲಿ ಓದಲಾದ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರಗಳಲ್ಲಿ ಸದರಿ 8 ಹುದ್ದೆಗಳು ಇಲಾಖೆಯ ಮುಖ್ಯ ಕಛೇರಿಗಳಲ್ಲಿ ಇರುವ ಒಂದೊಂದು ಹುದ್ದೆಗಳಾಗಿದ್ದು, ಇಲಾಖೆಯ ಆಡಳಿತಾತ್ಮಕ ವಿಷಯಗಳ ನಿರ್ವಹಣೆಗೆ ಈ ಹುದ್ದೆಗಳನ್ನು ಖಾಯಂ ಆಗಿ ಮುಂದುವರೆಸುವಂತೆ ಪ್ರಸ್ತಾಪಿಸಿರುತ್ತಾರೆ.

ಸರ್ಕಾರವು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಲಿಪಿಕ ವೃಂದದ ತಾತ್ಕಾಲಿಕ ಪತ್ರಾಂಕಿತ ಸಹಾಯಕರು ಹಾಗೂ ಗ್ರೂಪ್-ಎ ವೃಂದದ ಈ ಮೇಲ್ಕಂಡ 8 ಹುದ್ದೆಗಳನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ಖಾಯಂ ಆಗಿ ಮುಂದುವರೆಸಲು ನಿರ್ಧರಿಸಿದೆ. ಆದುದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 67 ಡಿಪಿಐ 2000, ದಿನಾಂಕ:09/08/2006**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ, ಸಾರ್ವಜನಿಕ ಶಿಕ್ಷಣ ಇಲಾಖೆಯ, ಲಿಪಿಕ ವೃಂದದ ಪತ್ರಾಂಕಿತ ಸಹಾಯಕರು ಹಾಗೂ ಗ್ರೂಪ್-ಎ ವೃಂದದ ಈ ಕೆಳಕಂಡ 8 ತಾತ್ಕಾಲಿಕ ಹುದ್ದೆಗಳನ್ನು ಖಾಯಂ ಆಗಿ ಮುಂದುವರೆಸಿ ಆದೇಶಿಸಿದೆ.

i) ಉಪ ನಿರ್ದೇಶಕರು (ಆಡಳಿತ) – ವೇತನ ಶ್ರೇಣಿ ರೂ.9580–14200 – 1 ಹುದ್ದೆ

ii) ಹಿರಿಯ ಸಹಾಯಕ ನಿರ್ದೇಶಕರು – ವೇತನ ಶ್ರೇಣಿ ರೂ.7400–13120 – 3 ಹುದ್ದೆಗಳು

iii) ಸಹಾಯಕ ನಿರ್ದೇಶಕರು – ವೇತನ ಶ್ರೇಣಿ ರೂ.5575–10620 – 4 ಹುದ್ದೆಗಳು

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 298 ವೆಚ್ಚ–8/2006, ದಿನಾಂಕ:13/06/2006 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸ್ವರ್ಣಲತಾ.ಎಂ.ಭಂಡಾರೆ),
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಸೇವೆಗಳು–1,2)

**ಇವರಿಗೆ:–**

ಸಂಕಲನಕರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು.

**ಪ್ರತಿಯನ್ನು:–**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ / ಧಾರವಾಡ.
4. ಎಲ್ಲಾ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು / ಧಾರವಾಡ / ಗುಲ್ಬರ್ಗಾ.
5. ಎಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, (ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಮುಖಾಂತರ)
6. ನಿರ್ದೇಶಕರು, ರಾಜ್ಯ ಖಜಾನಾ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು.
7. ರಾಜ್ಯದ ಎಲ್ಲಾ ಖಜಾನಾಧಿಕಾರಿಗಳು.
8. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ–8, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
9. ನಿರ್ದೇಶಕರು, ಜನಶಕ್ತಿ ಮತ್ತು ಉದ್ಯೋಗ ವಿಭಾಗ, ಯೋಜನಾ ಇಲಾಖೆ, ಬಹು ಮಹಡಿ ಕಟ್ಟಡ, ಬೆಂಗಳೂರು.
10. ನಿರ್ದೇಶಕರು, ಪಿ.ಎಂ.ಐ ವಿಭಾಗ, ಯೋಜನಾ ಇಲಾಖೆ, ಬಹು ಮಹಡಿ ಕಟ್ಟಡ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ–8)
12. ಮಾನ್ಯ ಕಾರ್ಯದರ್ಶಿ / ಸಹ ಕಾರ್ಯದರ್ಶಿಯವರ ಆಪ್ತ ಶಾಖೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ.
13. ಶಾಖಾ ರಕ್ಷಾ ಕಡತ // ಹೆಚ್ಚುವರಿ ಪ್ರತಿಗಳು.